ಆ ಕೆಲಸ ಕಲಿಸುವುದು ನಮ್ಮ ತಾತನಿಗೆ ಸುತರಾಂ ಇಷ್ಟವಿರಲಿಲ್ಲ. ನಾದಸ್ವರ ಊದಿದರೆ ಗುಂಡಿಗೆ ಒಣಗಿಹೋಗುತ್ತವೆ ಎಂದು ಆತನಿಗೆ ಭಯವಿತ್ತಂತೆ. ನಮ್ಮಪ್ಪ ಕೇಳಲಿಲ್ಲ. ಕಷ್ಟಪಟ್ಟು ಇನ್ನೂ ಇಷ್ಟದಿಂದ ಸನಾದಿ ಊದುವುದನ್ನು ಕಲಿತುಕೊಂಡ. ಮದ್ರಾಸಿನಲ್ಲಿ ಮೆಡಿಕಲ್ ಸೀಟು ಸಿಕ್ಕು ಪೆಟ್ಟಿಗೆ ಗಂಟು ಹೊತ್ತುಕೊಂಡು ಹೊರಡಲನುವಾದಾಗ ಕೂಡ ನಮ್ಮಪ್ಪನ ಜೊತೆಯಾಗಿ ಹೊರಟು ನಿಂತಿದ್ದು ಬಿಗಿಯಾಗಿ ಬಟ್ಟೆಯಲ್ಲಿ ಸುತ್ತಿದ ನಾದಸ್ವರವೇ. ವಿದ್ಯಾರ್ಥಿಯಾಗಿದ್ದಾಗ ಆ ನಾದಸ್ವರವೇ ಆತನಿಗೆ ಸಾಕಷ್ಟು ಮಂದಿ ಫ್ರೆಂಡ್ಸ್ ಅನ್ನು ಸಂಪಾದಿಸಿ ಕೊಟ್ಟಿತು.

ಆತನಿಗೆ ಸಂಗೀತವೆಂದರೆ ಎಷ್ಟು ಹುಚ್ಚಿತ್ತೆಂದರೆ ಮದ್ರಾಸಿನಲ್ಲಿರುವಷ್ಟು ಕಾಲ ಪ್ರತಿ ವರ್ಷ ಆತ ತಪ್ಪದೆ ಮಾಡಿದ ಕೆಲಸವೆಂದರೆ ತಿರುವಾಯೂರು ತ್ಯಾಗರಾಜರ ಆರಾಧನೆಗೆ ಹಾಜರಾದದ್ದು. ಉತ್ಸವದ ಕಡೆಯ ದಿನ ತ್ಯಾಗರಾಜ ಸ್ವಾಮಿಗಳನ್ನು ಪಲ್ಲಕ್ಕಿಯಲ್ಲಿ ಕೂರಿಸಿ ನಾಲ್ಕು ಬೀದಿಗಳಲ್ಲೂ ಮೆರವಣಿಗೆ ತೆಗೆಯುತ್ತಿದ್ದುದನ್ನು ನಮಗೆ ಯಾವಾಗ ವರ್ಣಿಸಿ ಹೇಳಿದರೂ ಆತನಿಗೆ ಮೈಯೊಳಗೆ ಆವೇಶ ತುಂಬಿಕೊಳ್ಳೋದು. ಆ ಕಾಲದಲ್ಲಿ ದಕ್ಷಿಣ ಭಾರತದ ದೊಡ್ಡ ದೊಡ್ಡ ಸಂಗೀತಗಾರರೆಲ್ಲ ತಂಡೋಪತಂಡವಾಗಿ ಬಂದು ಅಲ್ಲಿ ನಾದಸ್ವರದಿಂದ ಅಮೃತವನ್ನು ಸುರಿಸೋರಂತೆ. ಆ ಅಮೃತವನ್ನು ಎಷ್ಟೋ ಸಲ ಹೊಟ್ಟೆ ತುಂಬ ಕುಡಿದು ಬಂದಿದ್ದೇನೆ ಎಂದು ಹೇಳುತ್ತಿದ್ದರು.

ಆದರೆ ಆತನಿಗೆ ಆ ಸಂಗೀತ ಒಂದೇ ಸಾಕಾಗಲಿಲ್ಲ. ಮಿಕ್ಕುಳಿದ ಹಸಿವೆಯನ್ನು ಆತ ಸಸಿಗಳೊಂದಿಗೆ, ಗಿಡಗಳೊಂದಿಗೆ ಕಾಲ ಕಳೆಯುತ್ತ ತೀರಿಸಿಕೊಳ್ಳಿದ್ದರು. ನಮ್ಮ ಮನೆ ತುಂಬ ಅವರು ನೆಟ್ಟು ಬೆಳೆಸಿದ ಸಸಿಗಳು ಮತ್ತು ಹೂಗಿಡಗಳೇ. ಆ ಹಸಿರಿನ ಹುಚ್ಚಿಗೆ ಮನೆಯೆಂಬೋದು ಅಡವಿಯಂತೆ ತಯಾರಾಗಿ ಚಾಕರಿ ಮಾಡಲಾಗದೆ ನಾನು ನಮ್ಮಮ್ಮ ಯಾವಾಗಲಾದರೂ ಬೇಸರಿಸಿಕೊಂಡರೆ ಅವರು ಹಾಯಾಗಿ ನಗುತ್ತ ಗಿಡಮರಗಳಿಲ್ಲದಿದ್ದರೆ ಹೇಗಮ್ಮಾ?

